
ದೈವೀಸಂಪತ್ತನ್ನೂ ಜ್ಞಾನವನ್ನೂ ಪಡೆಯುವುದಕ್ಕೆ ಸಾಧಕವಾದ, ಕಾರ್ಯಸಾಧ್ಯವಾದ, ಮಾರ್ಗವನ್ನು ಹೇಳಿದೆ (*ಭಗವದ್ಗೀತೆ*, ಅಧ್ಯಾಯ ೧೬-೧೮). ಚಂಚಲವೂ ದುರ್ನಿಗ್ರಹವೂ ಆದ ಮನಸ್ಸನ್ನು ಅಭ್ಯಾಸ ವೈರಾಗ್ಯಗಳಿಂದ ಹಿಡಿತಕ್ಕೆ ತಂದುಕೊಂಡು ಧ್ಯಾನಸಿದ್ಧನಾಗುವ ರೀತಿಯನ್ನು ಹೇಳಿದೆ (*ಭಗವದ್ಗೀತೆ*, ಅಧ್ಯಾಯ ೬). ಭಕ್ತಿ, ಯಾಜ್ಞಿಕ, ವೇದಾಂತ – ಈ ಮತಗಳೂ ಸೂಕ್ಷ್ಮವಾಗಿ ಬಂದಿವೆ. ಆದರೆ ಅವೂ ಕೂಡ ಸಾಂಖ್ಯಯೋಗಗಳಿಗೆ ಸಂಬಂಧಪಟ್ಟಂತೆಯೇ ಇವೆ. ಶ್ರೀಕೃಷ್ಣನು ಮಹಿಮಾಪುರುಷನೇನೋ ಹೌದು; ಅವನ ಮಹಿಮೆಯಿಂದ ವೈಷ್ಣವ ಧರ್ಮವು ಬಲಗೊಂಡು ಬೆಳೆಯಿತು. ಆದರೆ ಅವನು ತನ್ನನ್ನು ಪೂಜಿಸಿ ಎಂದು ಹೇಳಿಕೊಂಡಿರಲಾರನು. ಭಗವದ್ಗೀತೆ ರಚಿತವಾದಾಗ ಕೃಷ್ಣನು ಬದುಕಿರಲಿಲ್ಲ; ಅವನ ಕಾಲಕ್ಕೆ ಅವನನ್ನು ಕೂಡ ಎಲ್ಲರೂ ಅವತಾರಪುರುಷನೆಂದಾಗಲಿ, ಭಗವಂತನೆಂದಾಗಲಿ ಎಣಿಸಿರಲಿಲ್ಲ. ಆದರೇನು? ಅವನು ಭಗವದ್ಗೀತೆಯಲ್ಲಿ ಬೋಧಿಸಿರುವುದನ್ನೆಲ್ಲಾ ಭಾರತದಲ್ಲಿ ಆಚರಿಸಿ ತೋರಿಸಿದ್ದಾನೆ. ಭಾರತದ ತುಂಬ ಇರುವುದು ಕೃಷ್ಣಧರ್ಮವೇ; ಭಾರತದಲ್ಲಿ ಅವನೂ ಇತರ ಮಹಾವ್ಯಕ್ತಿಗಳೂ ಆಡಿದ ಮಾತು, ನಡೆದ ಮಾರ್ಗ ಇವುಗಳ ಒಟ್ಟು ಸಾರಾಂಶವೇ ಭಗವದ್ಗೀತೆ. ಅವನು ಯೋಗೇಶ್ವರ; ತನ್ನ ಸಿದ್ಧಿಯನ್ನು ಸಂಧಾನ ಕಾಲದಲ್ಲಿಯೂ, ಪ್ರಾಯಶಃ ಗೀತೋಪದೇಶದ ಸಂದರ್ಭ ದಲ್ಲಿಯೂ ಉಪಯೋಗಿಸಿದನು. ಕೊನೆಗೆ ಯೋಗದಿಂದ ದೇಹತ್ಯಾಗಮಾಡಿದನು. ಭೀಷ್ಮದ್ರೋಣರೂ ಬಲರಾಮ ವಸುದೇವರೂ ಹೀಗೆಯೇ ಯೋಗದಿಂದಲೇ ದೇಹಬಿಟ್ಟರು. ಅವರು ಅದನ್ನು ನಿತ್ಯಜೀವನದಲ್ಲಿ ಸಾಧನೆಯಾಗಿಟ್ಟುಕೊಂಡಿದ್ದು, ಅದರಲ್ಲಿ ಸಿದ್ಧಿಪಡೆದವರಾಗಿರಬೇಕು.

ಪ್ರಕೃತಿಯು ಸ್ವತಂತ್ರವಾಗಿ ಪರಿಣಾಮಗೊಳ್ಳುತ್ತ ಹೋಗುತ್ತದೆಯೆಂದೂ, ಆ ಪರಿಣಾಮಕ್ಕೂ ಅದರ ವೈವಿಧ್ಯಕ್ಕೂ ಅದರ ಗುಣಗಳಲ್ಲಿ ಆದ ಏರುಪೇರುಗಳೇ ಕಾರಣವೆಂದೂ, ಆ ಕ್ಷುಬ್ಧಸ್ಥಿತಿಗೆ ಪುರುಷನಿಂದಾದ ಉದ್ರೇಕವೇ ಕಾರಣವೆಂದೂ ಹಿಂದೆ ನೋಡಿದೆವು. ಆದ್ದರಿಂದ ಪ್ರಕೃತಿಯು ಯಾರ ಅಧೀನಕ್ಕಾದರೂ ಒಳಪಟ್ಟು ನಡೆಯಿತೆಂದರೆ ಅದು ಪುರುಷ ಅಥವಾ ಅವರಿಬ್ಬರಿಗೂ ಮೇಲ್ಪಟ್ಟ ಈಶ್ವರನಾಗಬೇಕು. ಈ ಈಶ್ವರಸಂಕಲ್ಪವೇ ವಿಧಿ. ಇದು ದೈವದಿಷ್ಟ, ಭಾಗಧೇಯ, ಭವಿತವ್ಯ, ಕಾಲ ನಿಯತಿ, ಧಾತೃ, ವಿಧಾತೃ, ಬ್ರಹ್ಮಾ, ಪ್ರಜಾಪತಿ ಎಂಬ ನಾನಾ ಹೆಸರುಗಳಲ್ಲಿ ಗೋಚರಿಸುತ್ತದೆ. ಇದಕ್ಕೆ ಕೆಲವು ಕಡೆಗಳಲ್ಲಿ ಸ್ವಲ್ಪ ಸ್ವಲ್ಪ ವ್ಯತ್ಯಾಸವಿದ್ದರೂ ಒಟ್ಟಿನ ಮೇಲೆ ಅವೆಲ್ಲಾ ಮನುಷ್ಯನಿಗೆ ಮೀರಿದ, ಆದರೆ ಪ್ರಪಂಚವನ್ನು ವಿಹಿತವಾಗಿ ನಡೆಸುವ, ಒಂದು ಹಿರಿಯ ಶಕ್ತಿಯೆಂದರೆ ತಪ್ಪಾಗಲಾರದು. ಆದರೆ ಅದು ಇಂದ್ರಾದಿದೇವತೆಗಳಂತೆ ದೃಷ್ಟವಲ್ಲ, ಅದೃಷ್ಟ (ಈಗ ನಮಗೆ ಅವರೂ ಅದೃಷ್ಟರೇ!). ಇವೇ ವೇದಕಾಲದಲ್ಲಿ 'ಋತ'ವೆಂದು ಸರ್ವಸಂಮಾನ್ಯವಾಗಿದ್ದದ್ದು. ಋತವೆಂಬ ಮಾತು ಈಗ ಅನೃತದಲ್ಲಿ ಉಳಿದಿದೆ (!). ಅನೃತವೆಂದರೆ ಋತವಲ್ಲದ್ದು. ಋತ, ಋಜು ಎರಡೂ ಒಂದೇ – ನೇರವಾದದ್ದು ಎಂದರ್ಥ. ಆದರಿಂದ, ವಕ್ರತೆ ಇಲ್ಲದಿರುವುದು, ಇದ್ದದ್ದು ಇದ್ದಂತೆ ಇರುವುದು, ಸತ್ಯ ಎಂಬ ಅರ್ಥವೂ ಬಂದಿದೆ. ಅದೇ 'ಧರ್ಮ' – ಲೋಕವನ್ನು ಎತ್ತಿ ಹಿಡಿದು ನಿಲ್ಲಿಸಿರುವುದು. ವಿಶ್ವವೆಲ್ಲವೂ ಒಂದು ನಿಯಮಕ್ಕೆ ಒಳಪಟ್ಟು, ಅದನ್ನು ಪಾಲಿಸಿಕೊಂಡು ಹೋಗುತ್ತಿರುವುದರಿಂದ ನಿಂತಿದೆ, ನಡೆಯುತ್ತಿದೆ ಎಂಬುದು ವೈಜ್ಞಾನಿಕ ಸಿದ್ಧಾಂತವೂ ಆಗಿದೆ. ಯಾವ ಒಂದು ಸೂತ್ರ ಎಲ್ಲಿ ಎಷ್ಟು ಸ್ವಲ್ಪ ಸಡಿಲಿಸಿದರೂ ಕೋಟ್ಯಂತರ ಜಗತ್ತುಗಳು ಕಳಚಿಬಿದ್ದು ಆತ್ಯಂತಿಕ ಧ್ವಂಸವಾದೀತು. ಆದರೆ ಹಿಂದೇನೂ ಹಾಗೆ ಆಗಿಲ್ಲ, ಮುಂದೆ ಆಗುವುದೂ ಇಲ್ಲ. ಹಗಲು, ರಾತ್ರಿ, ಮಳೆ, ಗಾಳಿ, ಬಿಸಿಲು, ಋತುಗಳು – ಎಲ್ಲವೂ ನಿಯತವಾಗಿ ಕ್ರಮವರಿತು ಆಯಾ 'ಕಾಲ'ದಲ್ಲಿ ಬರುತ್ತಿರುವುದೂ ಆ ನಿಯಮಪಾಲನೆಯ ಫಲವೇ. ಇಂದ್ರ ಅಗ್ನಿ ಯಮ ವಾಯು ಸೂರ್ಯ ಮುಂತಾದವರಿಗೂ ಆ ನಿಯಮದ ಹೆದರಿಕೆಯುಂಟು. ಮನುಷ್ಯನೇ ಅದನ್ನು ಮೀರಬೇಕೆನ್ನುವವನು, ಮೀರುತ್ತೇನೆಂದು ತಿಳಿದುಕೊಂಡಿರುವವನು! ಅದು ಸಾಧ್ಯವಿಲ್ಲ ಎಂದು ಮಹಾಭಾರತದಲ್ಲಿ ಎಲ್ಲರೂ ತಿಳಿದುಕೊಂಡಿದ್ದರು. ಸ್ವಸಾಮರ್ಥ್ಯದಲ್ಲಿ ಯಥೇಚ್ಛವಾದ ನಂಬಿಕೆಯಿದ್ದ ದುರ್ಯೋಧನ ಕರ್ಣರೂ ಆ ಮಾತನ್ನಾಡುತ್ತಾರೆ.

ಮಹಾಭಾರತವು ಮನುಷ್ಯಪ್ರಯತ್ನವಿಲ್ಲವೆನ್ನುವುದಿಲ್ಲ; "ಮನುಷ್ಯನು ತನ್ನನ್ನು ತಾನು ಯಾವಾಗಲೂ ನಿರಾಕರಿಸಿಕೊಳ್ಳಬಾರದು; ಅಂಥವನಿಗೆ ಸುಖವಿಲ್ಲ." "ಶೀತ ಉಷ್ಣ ಮಳೆ ಹಸಿವು ನೀರಡಿಕೆ ಮುಂತಾದ ದೈವಕೃತವಾದ ವಿಷಯಗಳನ್ನು ಮನುಷ್ಯಪ್ರಯತ್ನದಿಂದ ಹೋಗಲಾಡಿಸಿಕೊಳ್ಳಬಹುದು." ಆದರೆ ಇದು ಸಣ್ಣ ಸಣ್ಣ ವಿಷಯಗಳಲ್ಲಿ ನಿಜ. ಮತ್ತು ಈ ಅಲ್ಪಸ್ವಲ್ಪ ಮನುಷ್ಯಪ್ರಯತ್ನವೂ ದೈವದ ಅಧೀನದಲ್ಲಿಯೇ ನಡೆದರೆ, ಅದಕ್ಕೆ ಏನು ಪ್ರಾಶಸ್ತ್ಯ ಬಂದೀತು? ಅದರ ಸ್ವಾತಂತ್ರ್ಯವೆಷ್ಟರಮಟ್ಟಿನದು? ಪ್ರಕೃತಿನಿಷ್ಠವಾದ ರಜೋಗುಣ ತಮೋಗುಣಗಳಿಂದ, ತನಗಿಷ್ಟವಿಲ್ಲದಿದ್ದ ಕೆಲಸವನ್ನೂ 'ಬಲಾದಿವ ನಿಯೋಜಿತ'ನಾಗಿ ಮಾಡಬೇಕಾಗಿ ಬಂದರೆ, ನಾವು ಮಾಡುವ ಪ್ರಯತ್ನ ವ್ಯರ್ಥವಾಗಿ ಪ್ರಕೃತಿ ನಿಯೋಜಿಸಿದ ದಾರಿಯಲ್ಲಿಯೇ ಹೋಗಬೇಕಾದರೆ, 'ನಾವು' ಎನ್ನುವುದು ಎಲ್ಲಿ ಬಂತು? **ಅಹಂಕಾರ ವಿಮೂಢಾತ್ಮಾ ಕರ್ತಾಹಮಿತಿ ಮನ್ಯತೇ** (*ಭಗವದ್ಗೀತೆ*, ೩-೨೭). ಹೀಗೆಂದು ದೈವವೊಂದೇ ಎಲ್ಲದಕ್ಕೂ ಕಾರಣವೆಂದೂ ಹೇಳಲಾಗುವುದಿಲ್ಲ. ಅಧಿಷ್ಠಾನ, ಕರ್ತೃ, ಕರಣ, ಪ್ರಯತ್ನ, ದೈವ ಇವೈದು ಒಟ್ಟಿಗೆ ಕಾರಣಗಳು (*ಭಗವದ್ಗೀತೆ*, ೧೮-೧೪). ಹೀಗೆ ದೈವ, ಪುರುಷಕಾರ – ಎರಡನ್ನೂ ಹೊಂದಿಸಿಕೊಂಡು ಕರ್ಮದಲ್ಲಿ ತೊಡಗುವ ವಿವೇಕಿಗೆ, ಕಾರ್ಯವಾಗಲಿಲ್ಲವೆಂಬ ವ್ಯಥೆಯಿರುವುದಿಲ್ಲ, ಆಯಿತೆಂಬ ಹರ್ಷವಿರುವುದಿಲ್ಲ. ಇದನ್ನು ಶ್ರೀಕೃಷ್ಣನ ಬೋಧನೆ, ಆಚರಣೆ ಎರಡರಲ್ಲಿಯೂ ನೋಡಬಹುದು. ಗೀತೆಯಲ್ಲಿ ಅದನ್ನೇ ಕಡೆದು ಉಂಡೆಯಾಗಿ ಎತ್ತಿಕೊಟ್ಟಿದೆ. ಶ್ರೀಕೃಷ್ಣನು ಅರ್ಜುನನಿಗೆ ಬೋಧಿಸಿದ್ದನ್ನು ಸ್ವತಃ ತಾನೇ ಆಚರಿಸಿದನು. ಅವನಿಗೆ ನನ್ನವರು, ತನ್ನವರು ಎಂಬ ವಿಶ್ವಾಸ ಅಂತಃಕರಣಗಳು ಇರಲಿಲ್ಲವೇ? ಆದರೆ ಕಾಲ ಬಂದಾಗ ಅವರನ್ನೂ ನಿರ್ಮಮತೆಯಿಂದ ಹೊಡೆದುಕೊಂದು ತಾನೂ ಶಾಂತನಾಗಿ ಪ್ರಾಣಬಿಟ್ಟನು. ⌘



# ಮಹಾಭಾರತದಲ್ಲಿ ನೀತಿ

ಬೆಳಗೋಡು ರಮೇಶ ಭಟ್

**ಮಹಾಭಾರತದ ವಸ್ತು ಸಂಕೀರ್ಣವಾದಂತೆ, ಅದು ತಿಳಿಸುವ ನೀತಿಯೂ ಬಹುಮುಖವಾದುದು. ಅದನ್ನು ಸ್ವಾರಸ್ಯವಾಗಿ, ನೇರವಾಗಿ, ಮನಮುಟ್ಟುವಂತೆ ಬಿಂಬಿಸಿರುವ ಲೇಖಕರು, ವೃತ್ತಿಯಿಂದ ಚೆನ್ನೈನಲ್ಲಿನ ಸಿಂಡಿಕೇಟ್ ಬ್ಯಾಂಕಿನಲ್ಲಿ ಅಧಿಕಾರಿಗಳಾಗಿದ್ದಾರೆ; ಆದರೆ ಪ್ರವೃತ್ತಿಯಿಂದ ಕವಿ, ಕತೆಗಾರ ಮತ್ತು ವಿಮರ್ಶಕ. ಇವರು ಹಲವಾರು ಸಂಘಸಂಸ್ಥೆಗಳಿಂದ ಪುರಸ್ಕರಿಸಲ್ಪಟ್ಟಿದ್ದಾರೆ ಮತ್ತು ಇವರ ಹಲವು ಕೃತಿಗಳಿಗೆ ವಿವಿಧ ಪ್ರಶಸ್ತಿಗಳು ಸಂದಿವೆ.**

ಇವತ್ತು ಎಲ್ಲವೂ materialistic ಆಗಿರುವ ಜಗತ್ತಿನಲ್ಲಿ ಪ್ರತಿಯೊಂದು ಕೆಲಸವನ್ನೂ, 'ಇದರಲ್ಲಿ ನಮಗೇನು ಲಾಭ?' ಎಂಬ ಪ್ರಶ್ನೆಯೊಂದಿಗೇ ಕೈಗೆತ್ತಿಕೊಳ್ಳಲಾಗುತ್ತದೆ. ಮಹಾಭಾರತದ ಓದಿನ ಮಾತು ಬಂದಾಗಲೂ ಇದರಿಂದ ನಮಗೇನು ಪ್ರಯೋಜನ ಎಂಬ ಮಾತು ಕೇಳಬರದಿರದು. ಆ ಪ್ರಶ್ನೆಗೆ ಉತ್ತರಿಸಹೊರಟಾಗ, ಮಹಾಭಾರತವು ಇತಿಹಾಸವೆ, ಪುರಾಣವೆ ಅಥವಾ ಕಾವ್ಯವೆ ಎನ್ನುವುದನ್ನು ನಿಶ್ಚಯಿಸಿಯೇ ಮುಂದೆ ಸಾಗಬೇಕಾಗುತ್ತದೆ. ನಾವು ಕಂಡ ಹಾಗೆ, ಮಹಾಭಾರತವು ಹಸ್ತಿನಾಪುರದ ಅರಸೊತ್ತಿಗೆಗಾಗಿ ಕುರುವಂಶದ ಅರಸರ ಮನೆಯಲ್ಲಿ, ಸುಮಾರು ಮೂರೂವರೆ ಸಾವಿರ ವರ್ಷಗಳ ಹಿಂದೆ ನಡೆಯಿತೆನ್ನಲಾದ ಕುಟುಂಬಕಲಹದ ಕತೆ. ಹಸ್ತಿನಾಪುರದ ಸಿಂಹಾಸನಕ್ಕಾಗಿ ಪಾಂಡವ ಕೌರವರ ನಡುವೆ ನಡೆವ ಹೋರಾಟದಲ್ಲಿ ಅಂದಿನ ಭಾರತದ ಯಾವತ್ತೂ ರಾಜಮನೆತನಗಳು ಭಾಗಿಯಾಗಿ, ಹದಿನೆಂಟು ದಿನಗಳ ಕುರುಕ್ಷೇತ್ರ ಯುದ್ಧದಲ್ಲಿ ಪರ್ಯವಸಾನಗೊಳ್ಳುವ ಮಹಾಭಾರತದ ಕತೆಯ ದುರಂತದ ಮುಂಚಾಚು, ಪಾಂಡವರ ಸ್ವರ್ಗಾರೋಹಣದಲ್ಲಿ ಕೊನೆಯಾಗುತ್ತದೆ. ಈ ಮಹಾಯುದ್ಧದ ಕತೆಗೆ ಪೂರಕವಾಗಿ ಉಪಕಥೆಗಳು, ಸ್ವತಂತ್ರವೇ ಆಗಿ ಉಳಿದುಬಿಡುವ ಕತೆಗಳು, ಶ್ರುತಿಸ್ಮೃತಿಗಳ ಹೊಳಹುಗಳು, ವೇದ ಉಪನಿಷತ್ತುಗಳ ಝಳಕುಗಳು, ಕಾಲಕಾಲಕ್ಕೆ ಪ್ರಕ್ಷಿಪ್ತವಾಗುತ್ತಾ ಬಂದ ಸಿದ್ಧಾಂತಗಳು, ತನ್ನಷ್ಟಕ್ಕೆ ತಾನೇ ಸಂಪೂರ್ಣವಾಗಿ ಪ್ರತ್ಯೇಕವಾಗಿ ಉಳಿಯುವ ಭಗವದ್ಗೀತೆ, ವಿಷ್ಣುಸಹಸ್ರನಾಮಗಳಂತಹ ಸ್ತೋತ್ರಭಾಗಗಳು – ಇಲ್ಲಿ ಇತಿಹಾಸ, ಪುರಾಣ ಮತ್ತು ಕಾವ್ಯಗಳು ಸಂಲಗ್ನಮಗ್ನವಾಗುವ ಸೊಗಸಿದೆ. ಇದರ ಓದಿನಿಂದ ಪ್ರಾಪ್ತವಾಗುವುದನ್ನು ಆನಂದವೆನ್ನೋಣವೆ? ಆಹ್ಲಾದವೆನ್ನೋಣವೆ? ಮಾರ್ಗದರ್ಶನವೆನ್ನೋಣವೆ?

ಹೀಗಾಗಿ, ಮಹಾಭಾರತದ ನೀತಿ ಯಾವುದು ಎಂದರೆ ಅದನ್ನು ಸುಲಭದಲ್ಲಿ ಉತ್ತರಿಸಲಾಗದು. ಪಂಚತಂತ್ರ, ಈಸೋಪನ ನೀತಿಕತೆಗಳು ಮೊದಲಾದ, ನೀತಿಹೇಳಲೆಂದೇ ಹುಟ್ಟಿಕೊಂಡ ಕತೆಗಳ ಹಾಗೆ ಮಹಾಭಾರತದ ಉದ್ದೇಶ ಸೀಮಿತವಾದುದಲ್ಲ. ಯಾಕೆಂದರೆ ಅದರ ಓದು **ಮಾರ್ಗವನ್ನು ತೋರಿಸುವ, ಮಾರ್ಗವನ್ನು ಹಿಡಿಸುವ** ಮತ್ತು **ಮಾರ್ಗದಲ್ಲಿ ನಡೆಸುವ** ಮೂರೂ ಕೆಲಸಗಳನ್ನು ಮಾಡಲೇಬೇಕಾದ ಫಲಶ್ರುತಿಯತ್ತ ಕಣ್ಣುನೆಟ್ಟಿರುತ್ತದೆ. ಈ ನಿಟ್ಟಿನಲ್ಲಿ ನಾವು ಗಮನಿಸಬೇಕಾದಂತೆ, ಧರ್ಮರಾಜನ ನಂತರ ಅಭಿಮನ್ಯು ಉತ್ತರೆಯರ ಪುತ್ರ ಪರೀಕ್ಷಿತ ಅರಸೊತ್ತಿಗೆಯೇರಿದ ಕತೆಯಿದೆ. ಮುನಿಶಾಪವು ಸರ್ಪದಂಶನದಿಂದ ಆತನ ಸಾವಿಗೆ ಕಾರಣವಾದಾಗ, ಪುತ್ರ ಜನಮೇಜಯ ಸರ್ಪಸಂತತಿಯನ್ನೇ ನಾಶ ಮಾಡುವ ಸರ್ಪಯಾಗವನ್ನು ಮಾಡಿ, ಮತ್ತೊಂದು ಶಾಪಕ್ಕೆ ತುತ್ತಾಗಿ ಕುಷ್ಠರೋಗಪೀಡಿತನಾದನಂತೆ. ಕುಷ್ಠರೋಗದಿಂದ ಮುಕ್ತಿಗಾಗಿ ವೈಶಂಪಾಯನ ಮುನಿಗಳು ಆತನಿಗೆ ಮಹಾಭಾರತದ ಕತೆಯನ್ನೂ, ವೈಶಂಪಾಯನರ ಶಿಷ್ಯರಾದ ಜೈಮಿನಿ ಮುನಿಗಳು ಜೈಮಿನಿ ಭಾರತದ ಕತೆಯನ್ನೂ ಹೇಳಿದರಂತೆ. ಮಹಾಭಾರತದ ಕತೆ ಕೇಳಿ ರಾಜ ಜನಮೇಜಯ ವ್ಯಾಧಿಮುಕ್ತನಾದನಂತೆ. ಕಾವ್ಯದ ಪ್ರಯೋಜನಗಳನ್ನು ಪಟ್ಟಿಮಾಡುತ್ತ, ಮಮ್ಮಟನೆಂಬ ಕಾವ್ಯಮೀಮಾಂಸಾಕಾರನು, "ವ್ಯವಹಾರಜ್ಞಾನ, ಅಮಂಗಳ ನಿವಾರಣೆ, ತತ್ಕಾಲದ ಸುಖ ಮತ್ತು ಕಾಂತಾಸಮ್ಮಿತದಂತೆ ಉಪದೇಶ" (ಕಾವ್ಯಪ್ರಕಾಶ: ೧ . ೨) ಎಂದದ್ದು ಇಲ್ಲಿ ನೆನಪಾಗುವುದಿಲ್ಲವೆ? ಮಹಾಭಾರತದ ಓದು ಮತ್ತು ಶ್ರವಣದಿಂದ ದೊರೆಯಬಹುದಾದ ಪ್ರಯೋಜನವನ್ನು ಹೇಳುವ ಅದ್ಭುತ ಸಂಕೇತವಿದು. ಮಹಾಭಾರತದ ಅಗಾಧವಾದ ಕತೆಯಲ್ಲಿ, ವ್ಯಾಸ ವೈಶಂಪಾಯನರ ಗಾಢ ತಿಳಿವಿನೊಂದಿಗೆ, ಕಾಲಕಾಲಕ್ಕೆ ಸೇರಿಕೊಳ್ಳುತ್ತಾ ಬಂದ ಸಂಗತಿಗಳೂ ಇವೆ. ಇದರ ಓದು ತಿಳಿವಳಿಕೆಯನ್ನು ಹೆಚ್ಚಿಸುವುದು ಮಾತ್ರವಲ್ಲ, ಮನಸ್ಸಿಗೆ ಸಂಸ್ಕಾರ ಮತ್ತು ಸನ್ಮಾರ್ಗ ದರ್ಶನವನ್ನು ಆಗುಮಾಡಿಕೊಡುತ್ತದೆ; ಧರ್ಮಾಧರ್ಮಗಳ ಪರಿಜ್ಞಾನ ಮತ್ತು ಅಭಿರುಚಿಯ ತಿದ್ದುವಿಕೆಯನ್ನು ಸಾಧ್ಯಮಾಡಿಕೊಡುತ್ತದೆ. ಮಹಾಭಾರತವು ಕಾವ್ಯದ ಗಡಿದಾಟಿ ಶಾಸ್ತ್ರವೂ ಆಗಿರುವುದರಿಂದ ಈ ವ್ಯುತ್ಪತ್ತಿ ಗಮನಾರ್ಹ.

ಏನು ಮಾಡಬೇಕು, ಏನು ಮಾಡಬಾರದು, ಮಾಡಬೇಕಾದದ್ದನ್ನು ಹೇಗೆ ಮಾಡಬೇಕು ಎನ್ನುವುದನ್ನು ಶಾಸ್ತ್ರಗಳೂ

ಹೇಳುತ್ತವೆ, ಇತಿಹಾಸ ಪುರಾಣಗಳೂ ಹೇಳುತ್ತವೆ, ಕಾವ್ಯ ಸಾಹಿತ್ಯವೂ ಹೇಳುತ್ತದೆ. ಈ ಹೇಳುವಿಕೆಯನ್ನು ನಮ್ಮ ಮೀಮಾಂಸಾಕಾರರು 'ಪ್ರಭು ಸಮ್ಮಿತ', 'ಮಿತ್ರ ಸಮ್ಮಿತ' ಮತ್ತು 'ಕಾಂತಾ ಸಮ್ಮಿತ' ಮಾರ್ಗಗಳೆಂದು ಗುರುತಿಸಿದ್ದಾರೆ. ಧರ್ಮ ಗ್ರಂಥಗಳು, ಶ್ರುತಿ ಸ್ಮೃತಿಗಳು ಹೇಳುವುದು ರಾಜಾಜ್ಞೆಯಂತೆ; ಅದು ಹೀಗೆ ಮಾಡಲೇಬೇಕು ಎಂಬ ಆಣತಿಯ ಸ್ವರೂಪ ದಲ್ಲಿರುತ್ತದೆ. ಇತಿಹಾಸಪುರಾಣಗಳಲ್ಲಿ ಗತ, ಅನುಗತ, ಸಂಗತ ಗಳು ಹೇಳುವ ಪಾಠದಲ್ಲಿ ಮಾಡುಬೇಡಗಳನ್ನು ಹೇಳುವ ಮಿತ್ರನ ಅನುಭವದ ಹೋಲಿಕೆಯಿರುತ್ತದೆ. ಕಾವ್ಯದಲ್ಲಾದರೋ, ಎದೆ ಯನ್ನು ಮುಟ್ಟಿ ಹೇಳುವ ನಲ್ಲೆಯ ಮಾತಿನ ಕಾಂತಾ ಸಮ್ಮಿತ ವಿದೆ. ಮಹಾಭಾರತವು ಕಾವ್ಯ, ಇತಿಹಾಸ ಮತ್ತು ಪಂಚಮ ವೇದವೂ ಆಗಿರುವುದರಿಂದ ಆನಂದ ಮತ್ತು ವ್ಯುತ್ಪತ್ತಿಯ ಜೊತೆಗೆ ಪ್ರೇರಣೆಯನ್ನೂ ನೀಡುವ ಅದರ ಓದು, ರಸಾಸ್ವಾದ ದೊಂದಿಗೆ ಸಂಸ್ಕಾರವನ್ನೂ ನೀಡುತ್ತದೆ.

ಮಹಾಭಾರತದ ಓದು ನಮಗೆ ಬೋಧಿಸುವ ಕೆಲವು ಪಾಠ ಗಳು ಅದ್ಭುತವಾಗಿವೆ. ಉದಾಹರಣೆಗೆ, 'ಕುರುಕ್ಷೇತ್ರ ಯುದ್ಧವನ್ನು ಪಾಂಡವರು ಹದಿನೆಂಟು ದಿನಗಳಲ್ಲಿ ಗೆಲ್ಲಲಿಲ್ಲ' ಎನ್ನುವುದು ಅಂತಹದೊಂದು ಮಾತು. ಆ ಮಹಾಯುದ್ಧ ನಡೆದದ್ದು ಹದಿನೆಂಟೇ ದಿನಗಳಾದರೂ ಅದಕ್ಕಾಗಿ ಪಾಂಡವರು ಹದಿನೆಂಟು ವರ್ಷಗಳ ತಯಾರಿ ನಡೆಸಿದ್ದರು. ಬಾಲ್ಯದಿಂದ ತಾವು ಅಧಿಕಾರ ವಂಚಿತರಾಗುತ್ತಿರುವುದನ್ನು ಅವರು ಗಮನಿಸುತ್ತಲೇ ಬಂದಿ ದ್ದರು. ಬದುಕಲ್ಲಿ ಎದುರಾದ ಪ್ರತಿಯೊಂದು ಅವಕಾಶವನ್ನೂ ಅವರು ತಮ್ಮ ಸಂಪತ್ತು, ಸಾಮರ್ಥ್ಯ ಮತ್ತು ಸೇನಾಸಂವರ್ಧನೆಗೆ ಬಳಸಿಕೊಂಡರು. ದ್ರೌಪದಿ, ಹಿಡಿಂಬೆ, ಸುಭದ್ರೆ ಇವರೆಲ್ಲ ರೊಂದಿಗಿನ ವಿವಾಹ ಎನ್ನುವುದು, ಪಾಂಡವರಿಗೆ ಆ ಕಾಲದ ಬಲಿಷ್ಠ ರಾಜಮನೆತನಗಳೊಂದಿಗೋ, ಶಕ್ತಿಗಳೊಂದಿಗೋ ಸಂಬಂಧ ಬೆಳೆಸಲು ನೆರವಾಯಿತು. ವಿಷಪ್ರಾಶನದಿಂದ ಮೂರ್ಛಿತನಾಗಿ ಪಾತಾಳಸೇರಿದ ಭೀಮ ಸರ್ಪಸಖ್ಯವನ್ನೂ ದೈಹಿಕ ಶಕ್ತ್ಯುತ್ಸಾಹಗಳನ್ನೂ ಸಂಪಾದಿಸುವುದು, ಕಾಡು ಸೇರಿದ ಅರ್ಜುನನು ವಿಶೇಷ ಶಸ್ತ್ರಾಸ್ತ್ರಗಳನ್ನು ಪಡೆಯುವುದು, ದ್ರೌಪದಿಯು ಅಕ್ಷಯಪಾತ್ರೆಯ ನೆರವಿನಿಂದ ಋಷಿಮುನಿಗಳ ಆಶೀರ್ವಾದ ಪಡೆದು ಪಾಂಡವರ ಭಾರವನ್ನು ಹಗುರಗೊಳಿಸು ವುದು, ಅರಣ್ಯವಾಸದ ಅವಧಿಯಲ್ಲಿ ಋಷಿಗಳ ವರ ಗಳಿಸು ವುದು – ಇವೆಲ್ಲ ಅತ್ಯುತ್ತಮ strategy ಗಳಂತೆ ಕಾಣಿಸುತ್ತವೆ. ಮುಂದೊಂದು ದಿನ ತಾವು ರಣಭೂಮಿಯಲ್ಲಿ ಕೌರವರನ್ನು ಎದುರಿಸಬೇಕಾಗುತ್ತದೆ ಎನ್ನುವುದನ್ನು ಮೊದಲೇ ಮನಗಂಡವರ ಹಾಗೆ ಅವರು ಸೀಮಿತ ಅವಧಿಯಲ್ಲಿ ತಮ್ಮ ಬಲವರ್ಧನೆ ಮಾಡಿಕೊಂಡರು. ಬದುಕಲ್ಲಿ ಮುಂದೊಂದು ದಿನ ಬರ ಬಹುದಾದ ಸಮಸ್ಯೆಯನ್ನು ಪೂರ್ವಭಾವಿಯಾಗಿ ಗುರುತಿಸು ವುದು, ಅದನ್ನು ಎದುರಿಸಲು ಬೇಕಾದ ಶಕ್ತಿ ಸಂಪತ್ತುಗಳನ್ನು ಕ್ರೋಡೀಕರಿಸುವುದು, ಬದುಕಿನಲ್ಲಿ ಎದುರಾಗುವ ಪ್ರತಿಯೊಂದು ಸವಾಲುಗಳನ್ನು (threat) ಅವಕಾಶಗಳನ್ನಾಗಿ (opportunity) ಪರಿವರ್ತಿಸುವುದು – ಇವೆಲ್ಲ ಯಶಸ್ಸಿನ ಅನಿವಾರ್ಯ ಸೂತ್ರ ಗಳೆನ್ನುತ್ತದೆ ಮಹಾಭಾರತ.

ಪ್ರತಿಯೊಂದು ಯಶಸ್ಸಿನ ಹಿಂದೊಬ್ಬಳು ಮಹಿಳೆಯಿರುತ್ತಾಳೆ ಎನ್ನುವುದನ್ನು ನೆನಪಿಸುವ ದ್ರೌಪದಿ, ಕುಂತಿಯರು; ಬಲಿದಾನ (sacrifice) ಎನ್ನುವುದು ತಂಡದ ನಿರ್ವಹಣೆಯಲ್ಲಿ ಅತ್ಯುತ್ಕೃಷ್ಟ ಕಲ್ಪನೆ ಎಂದು ಸಾಬೀತುಪಡಿಸಿದ ಅಭಿಮನ್ಯು – ಇವರೆಲ್ಲ ಮಹಾಭಾರತದ ಐತಿಹಾಸಿಕ, ಪೌರಾಣಿಕ ಮತ್ತು ಕಾಲ್ಪನಿಕ ಮಿತಿ ಗಳನ್ನು ದಾಟಿ ನಿಲ್ಲುವ ಅದ್ಭುತಗಳು. ಅವರ ಯಶೋಗಾಥೆಗಳೇ ಮಹಾಭಾರತ ನಮಗೆ ಕೊಡುವ ಅದ್ಭುತ ನೀತಿಪಾಠಗಳು.

ಇದಲ್ಲದೇ, ಮಹಾಭಾರತದ ಓದು, ಇವತ್ತೂ ಅತ್ಯುಪಯುಕ್ತ ಎನ್ನಿಸುವ ಐದು ಮಾರ್ಗದರ್ಶನ ಸೂತ್ರಗಳನ್ನು ನಮ್ಮ ಮುಂದಿಡುತ್ತದೆ. ಇವೆಲ್ಲ ವಿಶಿಷ್ಟವೂ ಅರ್ಥಪೂರ್ಣವೂ ಆದ ಜೀವನದರ್ಶನವೂ ಆಗಿರುವುದನ್ನು ಕಾಲ ನಮಗೆ ಮನಗಾಣಿಸಿ ಕೊಟ್ಟಿದೆ.

**೧. ಧರ್ಮರಾಜತ್ವ:** ವಿನಯ, ವಿಶ್ವಾಸ, ಶಿಸ್ತುಬದ್ಧ ಬದುಕನ್ನು ನಡೆಸುವವರು ಯಶಸ್ಸಿಗಾಗಿ ಸ್ವಲ್ಪಕಾಲ ಕಾಯಬೇಕಾಗುತ್ತದೆ, ನಿಜ. ಆದರೆ ಅಂತಹ ಯಶಸ್ಸನ್ನು ಸಮಾಜ ಗೌರವಿಸುತ್ತದೆ. ಧರ್ಮರಾಜ ತನ್ನ ಭುಜಬಲದಿಂದ ಗೆದ್ದ ಯುದ್ಧಗಳ ಸಂಖ್ಯೆ ಬಹಳ ಕಡಿಮೆಯಿದ್ದೀತು. ಆದರೆ, ತನ್ನ ವಿನಯ ಮತ್ತು ಧರ್ಮ ನಿಷ್ಠೆಯಿಂದ ಅಧಿಕಾರದಲ್ಲಿಲ್ಲದ ಹೊತ್ತೂ ಕೂಡ ಆತ ಜನರ ಪ್ರೀತ್ಯಾದರಗಳನ್ನು ಗಳಿಸುತ್ತಲೇ ಬಂದನು, ಅಲ್ಲವೇ?

**೨. ದುರ್ಯೋಧನತ್ವ:** ಅಹಂಕಾರ, ಅಮಾನುಷತ್ವ, ವಿನಾ ಕಾರಣ ದ್ವೇಷ ತಂದುಕೊಡುವ ಗೆಲುವು ತಾತ್ಕಾಲಿಕವಾದುವು. ಅಧಿಕಾರ ಕೈಯಲ್ಲಿದ್ದಾಗಲೂ ದುರಹಂಕಾರ ಆತನನ್ನು ಜನರಿಂದ ದೂರ ಮಾಡುತ್ತಾ ಹೋಯಿತು.

**೩. ಅರ್ಜುನತ್ವ:** ಗುರಿಯಲ್ಲಿ ತಾದಾತ್ಮ್ಯ ಯಶಸ್ಸನ್ನು ತಂದು ಕೊಡುತ್ತದೆ. ಹಕ್ಕಿಯ ಕಣ್ಣಿಗೆ ಬಾಣ ಗುರಿಯಿಡುವಾಗ ಅರ್ಜುನ ದೃಷ್ಟಿನೆಟ್ಟದ್ದು ಹಕ್ಕಿಯ ಕಣ್ಣಿನ ಮೇಲೆ ಮಾತ್ರ; ಮರ, ರೆಂಬೆ, ರೆಂಬೆಯ ಮೇಲೆ ಕುಳಿತ ಹಕ್ಕಿಯ ಮೇಲಲ್ಲ. ಗುರಿಯನ್ನಷ್ಟೇ ಗಮನದಲ್ಲಿಟ್ಟು ಸಾಗಿದವರಿಗೆ ಕೊನೆಯಲ್ಲಿ ಯಶಸ್ಸು ಕಟ್ಟಿಟ್ಟ ಬುತ್ತಿ. (*ಹಿಂದಿನ ಪುಟದ ಚಿತ್ರ ನೋಡಿ* – ಸಂ.)

**೪. ಕೃಷ್ಣತ್ವ:** ಜಗತ್ತಿನ ಮೊದಲ management ಗುರು ಕೃಷ್ಣ. ಕರ್ತವ್ಯದಲ್ಲಿ ಕಣ್ಣಿರಲಿ, ಯಶ ಅಪಯಶಗಳ ಮೇಲಲ್ಲ; ಯಾವ ಕೆಲಸವೂ ಸಣ್ಣದಲ್ಲ, ಸಾರಥಿಯೂ ಯುದ್ಧದ ಗತಿಯನ್ನು ನಿರ್ಣಯಿಸಬಹುದು, ಶಕ್ತಿಯಿಂದ ಗೆಲ್ಲಲಾಗದ್ದನ್ನು ಯುಕ್ತಿಯಿಂದ ಗೆಲ್ಲಬಹುದು – ಇವೇ ಮೊದಲಾದ ಹೊಸ ಆಡಳಿತದ ಸೂತ್ರ ಗಳನ್ನು ಮಹಾಭಾರತದುದ್ದಕ್ಕೂ ಕೃಷ್ಣ ಮಂಡಿಸುತ್ತಾ ಹೋಗುವ ಬಗೆಯಲ್ಲಿ ಸೊಗಸಿದೆ, ನವೀನತೆಯೂ ಅಡಗಿದೆ.

**೫. ಭಗವದ್ಗೀತೆ:** ಭಗವದ್ಗೀತೆ ಜಗತ್ತಿನ ಮೊತ್ತಮೊದಲ motivation ಮಂತ್ರಶಾಸ್ತ್ರ. ಕಾರ್ಯದಿಂದ ಹಿಂಜರಿಯುತ್ತಿರುವ ವರನ್ನು, ತಮ್ಮ ಕರ್ತವ್ಯವನ್ನು ಮರೆತು ಕುಳಿತವರನ್ನು ಕರ್ಮದ ಹೆಸರಿನಲ್ಲಿ ಕಾರ್ಯೋನ್ಮುಖವಾಗಿಸುವುದು ಭಗವದ್ಗೀತೆಯ ಉದ್ದೇಶ. ಧರ್ಮ ಕೆಲವರು ಹೇಳುವಂತೆ ಒಂದು ಅಫೀಮು ಅಲ್ಲ; ಅದೊಂದು ಸ್ಫೂರ್ತಿಯೂ ಆಗಬಲ್ಲದು ಎನ್ನುವುದನ್ನು